
## ಪ್ರಾಣ ಮುಖ್ಯ!




ಆಂಜನೇಯನ ಭಕ್ತನೊಬ್ಬ ತನ್ನ ಆಟೊರಿಕ್ಷಾದ ಮೇಲೆ ದೊಡ್ಡ ಅಕ್ಷರಗಳಲ್ಲಿ 'ಮುಖ್ಯಪ್ರಾಣ' ಎಂದು ಬರೆಸಿದ್ದ. ಆತನ ಆಟೊ ಯಾವಾಗಲೂ ಅಗತ್ಯಕ್ಕಿಂತ ಹೆಚ್ಚಿನ ವೇಗದಲ್ಲಿಯೇ ಸಂಚರಿಸುತ್ತಿತ್ತು. ಒಮ್ಮೆ ನಮ್ಮೂರಿನ ಜನನಿಬಿಡ ರಸ್ತೆಯಲ್ಲಿ ವಯೋವೃದ್ಧರೊಬ್ಬರು ರಸ್ತೆ ದಾಟುತ್ತಿದ್ದರು. ಅವರ ಮೈಮೇಲೆಯೇ ಬಂತೆಂಬಂತೆ ಆಟೊ ನುಗ್ಗಿಬಂತು. ಹೇಗೋ ತಪ್ಪಿಸಿಕೊಂಡ ಅವರು, 'ಮುಖ್ಯಪ್ರಾಣ' ಎಂಬ ಫಲಕ ನೋಡಿ, 'ಅಲ್ಲಯ್ಯ, ಬೋರ್ಡ್ ಸರಿ ಬರೆಸೋದಲ್ಲವೇನಯ್ಯ, ಪ್ರಾಣಮುಖ್ಯ ಅನ್ನೋ ಬದಲು 'ಮುಖ್ಯಪ್ರಾಣ' ಅಂತ ಬರೆಸಿದ್ದೀಯಲ್ಲ. ಎಲ್ಲರಿಗೂ ಅವರವರ ಪ್ರಾಣ ಮುಖ್ಯಾನೇ ಕಣಯ್ಯಾ' ಎಂದು ಬೆವರು ಒರೆಸಿಕೊಂಡು ರಸ್ತೆ ದಾಟಿದರು.

**ವಾ. ಮುರಳೀಧರ**

## ಒಂದೇ ಜೊತೆ

ಗೆಳತಿ ಚಿತ್ರಾಳ ನಾಲ್ಕು ವರ್ಷದ ಪುಟಾಣಿ ಸಂಸ್ಕೃತಿಯ ಶಾಲೆ ಆರಂಭವಾದರೂ ಟೇಲರ್ ಮೂರು ಜೊತೆ ಸಮವಸ್ತ್ರಗಳಲ್ಲಿ ಒಂದು ಜೊತೆ ಮಾತ್ರ ಹೊಲಿದುಕೊಟ್ಟ. ದಿನಾಲು ಆ ಒಂದೇ ಯೂನಿಫಾರ್ಮನ್ನು ಒಗೆದು ಇಸ್ತ್ರಿ ಮಾಡಿ ತೊಡಿಸುತ್ತಿದ್ದನ್ನು ಕಂಡ ಪುಟಾಣಿ, 'ದಿನಾ ಒಂದೇ ಬಟ್ಟೆನಾ?' ಎಂದು ಸಿಡುಕಿತು. ಅವಳಮ್ಮ 'ಗಾಂಧಿ ತಾತ ಎರಡೇ ಜೊತೆ ಪಂಚೆಯಲ್ಲಿ ಸರಳ ಜೀವನ ನಡೆಸಿ ಮಹಾತ್ಮರಾದರು' ಎಂದು ತಿಳಿಸಿ ಹೇಳಿದಳು. ಅರಳುಗಣ್ಣುಗಳನ್ನು ಇನ್ನಷ್ಟು ಅಗಲಿಸಿ ಅಮ್ಮನ ಮಾತನ್ನು ಆಲಿಸಿದ ಸಂಸ್ಕೃತಿ, 'ಗಾಂಧಿ ತಾತನ ಹತ್ತಿರ ಎರಡು ಪಂಚೆ ಇತ್ತಲ್ಲಮ್ಮಾ, ನನ್ನ ಹತ್ರ ಇರೋದು ಒಂದೇ ಯುನಿಫಾರ್ಮ್' ಅಂತ ರಾಗವಾಗಿ ಮುಗ್ಧವಾಗಿ ನುಡಿದಾಗ ಚಿತ್ರಾಳಿಗೆ ಆ ಕ್ಷಣ ಏನು ಹೇಳಲು ತಿಳಿಯದೇ ಸುಮ್ಮನೆ ನಿಂತಳು.



**ಇಂದಿರಾ ಮೋಟೆಬೆನ್ನೂರ**